ಕಾರ್ಯಗತ ಮಾಡುತ್ತಿರತಕ್ಕಂಥದ್ದು. ಶವ ಸಂಸ್ಕಾರಕ್ಕೂ ಕೂಡ ಸರ್ಕಾರ ಬಡವರ ನೆರವಿಗೆ ಹೋಗುವ ಕೆಲಸವನ್ನು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸದನದಲ್ಲಿ ಘನತೆವೆತ್ತ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣಕ್ಕೆ ತಂದಿರತಕ್ಕಂಥ ವಂದನಾ ನಿರ್ಣಯಕ್ಕೆ ನಾವು ಅನುಮೋದನೆಯನ್ನು ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಗೃಹ ಸಚಿವರು): ಮಾನ್ಯ ಛೇರ್ಮನ್‌ರವರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಾಡಿದಂಥ ವಂದನಾ ನಿರ್ಣಯವನ್ನು ತಾವು ಸಭೆಯಲ್ಲಿ ಪಾಸ್ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ನಿರ್ಣಯ:

ಛೇರ್ಮನ್: ಪ್ರಸ್ತಾವ ಏನೆಂದರೆ, ದಿನಾಂಕ 25.01.2007ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

7. ನಿಯಮ 69ರ ಮೇರೆಗೆ ಚರ್ಚೆ:

ವಿಷಯ: ಬೆಂಗಳೂರು ಹಾಗೂ ರಾಜ್ಯದ ಇತರೆ ಪ್ರದೇಶಗಳಲ್ಲಿ ಕೋಮು ಗಲಭೆಯಿಂದಾಗಿ ಉಂಟಾಗಿರುವ ಅಶಾಂತಿ, ಆಸ್ತಿಪಾಸ್ತಿ ನಷ್ಟ ಹಾಗೂ ಪ್ರಾಣ ಹಾನಿ ಉಂಟಾಗಿರುವ ಬಗ್ಗೆ.

ಛೇರ್ಮನ್: ಈಗ ನಿಯಮ 69 ರಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯಗಳ ಮೇಲೆ ಅರ್ಧ ಗಂಟೆ ಕಾಲಾವಧಿ ಚರ್ಚೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಈಗ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ವಿಷಯ ಪ್ರಸ್ತಾಪ ಮಾಡಿ ಮಾತನಾಡಬೇಕು.

(ಸದನದ ಬಾವಿಯಿಂದಲೇ ಕಾಂಗ್ರೆಸ್ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಛೇರ್ಮನ್‌ರವರೆ, ನಾವು ಸದನ ನಡೆಸಿ ಎಂದು ಹೇಳಿದ್ದು ಈ ರೀತಿಯಲ್ಲ. ಸದನವನ್ನು ಈ ರೀತಿ ನಡೆಸಿ ಎಂದು ನಾವು ಹೇಳಿಲ್ಲ. ನೀವು ಇಲ್ಲಿ ಏನು ನಡೆಸುತ್ತಿದ್ದೀರಿ? ಏನು ನೀವು ಸದನವನ್ನು ನಡೆಸುತ್ತಿದ್ದೀರೋ ಅಥವಾ ಜಾತ್ರೆಯನ್ನು ನಡೆಸುತ್ತಿದ್ದೀರೋ?

ಛೇರ್ಮನ್: ತಾವು ಈಗ ನಿಯಮಾವಳಿ ಪ್ರಕಾರ ಮಾತನಾಡುತ್ತೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಛೇರ್ಮನ್‌ರವರೆ, ಏನು ಸದನವನ್ನು ನೀವು ನಡೆಸುತ್ತಿದ್ದೀರಿ, ಇದು ಸದನವನ್ನು ನಡೆಸತಕ್ಕಂಥ ವಿಧಾನವೇ? ಯಾವ ರೀತಿ ನೀವು ಸದನವನ್ನು ನಡೆಸುತ್ತಿದ್ದೀರಿ? ಈ ಸದನಕ್ಕೆ ಏನಾದರೂ ಘನತೆ ಗೌರವವನ್ನು ತರಬೇಕು ಎಂಬುದೇನಾದರೂ ನಿಮ್ಮಲ್ಲಿದೆಯಾ? ಈ ರಾಜ್ಯಕ್ಕೆ ಏನಾದರೂ ಘನತೆ ಗೌರವವನ್ನು ತರಬೇಕು ಎಂದು ನಿಮಗೇನಾದರೂ ಇದೆಯೇ? ಏನು ಸದನವನ್ನು ನೀವು ನಡೆಸುತ್ತಿರುವುದು?

ಏನು ಮಾತನಾಡಬೇಕು ಹೇಳಿ? ಏನು ಮಾತನಾಡುತ್ತಾರೆ? ಮಾತನಾಡುವುದು ಏನು ಕೇಳುತ್ತಿದೆ?

(ಗೊಂದಲ)

ಛೇರ್ಮನ್: ನಿಯಮ 69 ರ ಪ್ರಕಾರ ಏನು ಹೇಳಬೇಕೆಂದು ಇದೆ ಅದನ್ನು ಅವರಿಗೆ ಹೇಳಿ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸದಸ್ಯರು ಈಗ ತಾವು ನಿಯಮ 69ರ ಮೇರೆಗೆ notice ಅನ್ನು ಕೊಟ್ಟಿದ್ದೀರಿ. ಅದರ ವಿಷಯ ಏನಿದೆ ಅದರ ಬಗ್ಗೆ ಮಾತನಾಡಿ. ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಏನು ಮಾತನಾಡಬೇಕೆಂದು ಕೇಳುತ್ತಿದ್ದಾರೆ. 69 ರ ನಿಯಮದ ಪ್ರಕಾರ ಅವರನ್ನು ಕರೆದಿದ್ದಾರೆ. ತಾವು ಅದರ ಬಗ್ಗೆ ಹೇಳುವುದಿದ್ದರೆ ಹೇಳಿ. ತಾವು ನಿಯಮ 69 ರ ಕೆಳಗೆ ಪ್ರಸ್ತಾಪ ಮಾಡಿ. ನಿಯಮಾವಳಿಗಳ ಪ್ರಕಾರ, ನಿಯಮ 69 ಕ್ಕೆ ಸರ್ಕಾರ ಉತ್ತರ ಕೊಡುವಂಥಾದ್ದು ಇದೆ. ಈಗ ಸದನದಲ್ಲಿ ನನ್ನ ಹೇಳಿಕೆಯನ್ನು ಮಂಡಿಸಿದ್ದೇನೆ. ಆ ಹೇಳಿಕೆಯನ್ನು ಪರಿಗಣಿಸಿ ತಾವು ಮುಂದಿನ ವಿಚಾರಕ್ಕೆ ಹೋಗಬಹುದು.

ವಿಷಯ: ಇತ್ತೀಚಿನ ದಿನಗಳಲ್ಲಿ ಬೆಂಗಳೂರು ಹಾಗೂ ರಾಜ್ಯದ ಇತರೆ ಪ್ರದೇಶಗಳಲ್ಲಿ ಕೋಮು ಗಲಭೆಯಿಂದಾಗಿ ಉಂಟಾಗಿರುವ ಅಶಾಂತಿ, ಆಸ್ತಿ-ಪಾಸ್ತಿ, ನಷ್ಟ ಹಾಗೂ ಪ್ರಾಣ ಹಾನಿ ಉಂಟಾಗಿರುವ ಬಗ್ಗೆ.

ರಾಜ್ಯದ ಮಂಗಳೂರು ಹಾಗೂ ಬೆಂಗಳೂರು ನಗರಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕೋಮುಗಲಭೆಗಳು ಉಂಟಾಗಿರುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯು ಮತೀಯ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಕಳೆದ 2–3 ವರ್ಷಗಳಿಂದ ಕೋಮು ಸೌಹಾರ್ದತೆಗೆ ಧಕ್ಕೆ ತರುವಂತಹ ಘಟನೆಗಳು ನಡೆಯುತ್ತಲೇ ಇರುತ್ತವೆ. ಕುದ್ರೋಳಿಯಲ್ಲಿರುವ ಕಸಾಯಿಖಾನೆಯ ಅಕ್ರಮ, ಗೋವು ಸಾಗಾಟ, ಪರಸ್ಪರ ಪ್ರೇಮ ಪ್ರಕರಣ, ಹಿಂದೂ ಮತ್ತು ಮುಸ್ಲಿಂ ಸಂಘಟನೆಗಳು ಜಿಲ್ಲೆಯಲ್ಲಿ

ಅಸ್ತಿತ್ವದಲ್ಲಿರುವಿಕೆಯ ಕೋಮುಗಲಭೆಗೆ ಪ್ರಚೋದನೆ ನೀಡುವ ವಿಷಯಗಳಾಗಿರುತ್ತವೆ. ದಿನಾಂಕ:1.10.2006ರಂದು ಬಜಪೆಯಲ್ಲಿ ಹಿಂದೂಪರ ಸಂಘಟನೆಯವರು ದೇವರ ವಿಗ್ರಹ ವಿಸರ್ಜನಾ ಮೆರವಣಿಗೆ ಕೊಂಡೊಯ್ಯುವ ಸಮಯದಲ್ಲಿ ಒಂದು ಕೋಮಿನ ಗುಂಪು ಅದನ್ನು ಕೊಂಡೊಯ್ಯಬಾರದೆಂದು ಪ್ರತಿಭಟಿಸಿ ಮೆರವಣಿಗೆಗೆ ತಡೆಯೊಡಿದ್ದು, ಇದರಿಂದ ಕುಪಿತಗೊಂಡ ಮತ್ತೊಂದು ಕೋಮಿನ ಜನರು ದುಷ್ಕೃತ್ಯದಲ್ಲಿ ತೊಡಗಿರುತ್ತಾರೆ. ಈ ಸಂಬಂಧ ಅನೇಕ ಜನ ಪೊಲೀಸ್ ಅಧಿಕಾರಿ ಹಾಗೂ ಸಾರ್ವಜನಿಕರು ಗಾಯಗೊಂಡಿದ್ದು, ಲಕ್ಷಾಂತರ ರೂಪಾಯಿ ಸಾರ್ವಜನಿಕ ಆಸ್ತಿ–ಪಾಸ್ತಿಗೆ ನಷ್ಟವಾಗಿರುತ್ತದೆ. ಒಂದು ವಾರ ಕಾಲ ಕರ್ಫ್ಯೂ ಮತ್ತು ನಿಷೇಧಾಜ್ಞೆ ಜಾರಿಗೊಳಿಸಿ ಪರಿಸ್ಥಿತಿಯನ್ನು ತಹಬದಿಗೆ ತಂದಿರುತ್ತದೆ.

ಈ ಸಂಬಂಧ ಪಕ್ಷಿನೋಟವನ್ನು ನೀಡುತ್ತಿರುವ ಪಟ್ಟಿಯನ್ನು ಲಗತ್ತಿಸಿದೆ.

ಇದೇ ರೀತಿ ದಿ:19.01.2007 ರಿಂದ 21.01.2007ರವರೆಗೆ ಬೆಂಗಳೂರು ನಗರದ ಪೂರ್ವ ವಿಭಾಗದಲ್ಲಿ ಬಹಿರಂಗವಾಗಿ ನಡೆದ ಎರಡು ರ್ಯಾಲಿಗಳ ಸಮಯದಲ್ಲಿ ಕೋಮು ಗಲಭೆ ಉಂಟಾಗಿರುತ್ತದೆ. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಜನರು ಶಾಂತತೆಗೆ ಭಂಗವುಂಟುಮಾಡಿ ಮನೆಗಳಿಗೆ ಮತ್ತು ವಾಹನಗಳಿಗೆ ಕಲ್ಲು ತೂರಾಟ ನಡೆಸಲು ಪ್ರಾರಂಭಿಸಿದಾಗ ಪರಿಸ್ಥಿತಿಯು ವಿಕೋಪಕ್ಕೆ ಹೋಗುವುದನ್ನು ಮನಗಂಡ ಪೊಲೋಸರು ಲಘು ಲಾಠಿಪ್ರಹಾರ ನಡೆಸಿ ಗುಂಪನ್ನು ಚದುರಿಸಿರುತ್ತಾರೆ. ಮುಂದುವರೆದ ಪರಿಸ್ಥಿತಿಯನ್ವಯ ಗಾಳಿಯಲ್ಲಿ ಗುಂಡುಹಾರಿಸಿದಾಗ ಒಬ್ಬ ಹುಡುಗ ಮೃತಪಟ್ಟು ಅನೇಕ ಪೊಲೀಸ್ ಅಧಿಕಾರಿಗಳಿಗೆ ಗಾಯಗಳಾಗಿರುತ್ತದೆ. ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಕೇಂದ್ರ ರಕ್ಷಣಾ ಪಡೆಗಳ ಪಥಸಂಚಲನ ನಡೆಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು.

ಈ ಸಂಬಂಧ ಸಂಕ್ಷಿಪ್ತ ಸಾರಾಂಶ ನೀಡುವ ಪಟ್ಟಿಯನ್ನು ಲಗತ್ತಿಸಿದೆ.

ಉಳಿದಂತೆ ರಾಜ್ಯದ ಉಳಿದೆಡೆ ಪರಿಸ್ಥಿತಿ ಶಾಂತವಾಗಿರುತ್ತದೆ. ಕೋಮುಗಲಭೆ ಹುಟ್ಟಿಸುವವರ ವಿರುದ್ಧ ವ್ಯಾಪಕ ಕಾರ್ಯಾಚರಣೆ ನಡೆಸುವಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾರ್ವಜನಿಕರ ಆಸ್ತಿ–ಪಾಸ್ತಿ ಪ್ರಾಣರಕ್ಷಣೆಗಾಗಿ ಇಲಾಖೆಯು ಬಾಧ್ಯವಾಗಿರುತ್ತದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಚೇರ್ಮನ್‌ರವರೆ ಸದನವನ್ನು orderನಲ್ಲಿಡಿ, ನಾವು ಮಾತನಾಡುತ್ತೇವೆ. ಹೆಸರಿಗೆ ನೀವು ಮಾತನಾಡಿ ಎಂದು ಹೇಳಿದರೆ ನಾವು ಮಾತನಾಡುವುದಕ್ಕೆ ಆಗುವುದಿಲ್ಲ. ಸದನವನ್ನು ನೀವು order ಗೆ ತನ್ನಿ, ಸದನವನ್ನು ನಿಯಂತ್ರಣ ಮಾಡಿ, ಸದನ order ನಲ್ಲಿ ಇಲ್ಲ, ಸದನ orderನಲ್ಲಿ ಇಲ್ಲದೆ ಇರುವಾಗ ನಾವು ಮಾತನಾಡುವುದಕ್ಕೆ ಆಗುವುದಿಲ್ಲ.

ಛೇರ್ಮನ್: ಈಗ ಸದನವನ್ನು 2.30 ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ಮಧ್ಯಾಹ್ನ 1 ಗಂಟೆ 21 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 2.30 ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು 3 ಗಂಟೆ 13 ನಿಮಿಷಕ್ಕೆ ಪ್ರಾರಂಭಗೊಂಡಾಗ ಛೇರ್ಮನ್‌ರವರಾದ ಶ್ರೀ ಆರಗ ಜ್ಞಾನೇಂದ್ರ ರವರು ಪೀಠವನ್ನು ಅಲಂಕರಿಸಿದ್ದರು)

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್: ಏನಿದು ಅಧ್ಯಕ್ಷರು ಇಲ್ಲ ಉಪಾಧ್ಯಕ್ಷರು ಇಲ್ಲ. ನೀವು ಸರದಿಯ ಅಧ್ಯಕ್ಷರು, ಪರಿಸ್ಥಿತಿ ಹೀಗಾದರೆ ಹೇಗೆ?

ಶ್ರೀ ಜೆ.ಸಿ.ಮಾಧುಸ್ವಾಮಿ: ಕೌನ್ಸಿಲ್‌ನ ಪರಿಸ್ಥಿತಿ ಇಲ್ಲಿ ಆಗಿ ಹೋಯಿತಲ್ಲವೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಪ್ಪರ್ ಹೌಸ್‌ನ ಪರಿಸ್ಥಿತಿ ಇಲ್ಲಿಗೆ ಬಂತೆ?

ಶ್ರೀ ಜೆ.ಸಿ.ಮಾಧುಸ್ವಾಮಿ: ಏನು ಸಾರ್, ಅಲ್ಲಿ ಏನು ಮಾಡಿದ್ದೀರಿ ಇಲ್ಲಿಯೂ ಅದನ್ನೇ ಮಾಡುವುದಕ್ಕೆ ಹೊರಟಿದ್ದೀರಿ.

ಶ್ರೀ ಎಂ.ಪಿ.ವೆಂಕಟೇಶ್: ಆ ಪೀಠದಲ್ಲಿ ಯಾರು ಕುಳಿತುಕೊಳ್ಳುತ್ತಾರೋ ಅವರೇ ಅಧ್ಯಕ್ಷರು... ಮಾತನಾಡುವುದು ಬೇಡ ಸ್ವಾಮಿ.. ಆ ಸ್ಥಾನದಲ್ಲಿ ಯಾರು ಕುಳಿತುಕೊಳ್ಳುತ್ತಾರೋ ಅವರೇ ಅಧ್ಯಕ್ಷರು. ಇದರಲ್ಲಿ ಒರಿಜಿನಲ್ ಅಥವಾ ಸೆಕೆಂಡ್ಸ್ ಎಂದು ಏನಾದರು ಇದೆಯೇ?

ಛೇರ್ಮನ್: ಮಾನ್ಯ ರಾಜ್ಯಪಾಲರಿಂದ ಒಂದು ಸಂದೇಶ ಬಂದಿದೆ. ಅದನ್ನು ಈಗ ಓದುತ್ತೇನೆ.